# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-1127/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 25/01/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಕನ್ನಡಾಂಬೆ ರಾಮಮೂರ್ತಿ ಗೌಡ, ನಂ. 49, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-560079 ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ದೂರುದಾರರಾದ ಶ್ರೀ ಕನ್ನಡಾಂಬೆ ರಾಮಮೂರ್ತಿ ಗೌಡ, ನಂ.49, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-560079 ರವರು ಈ ಸಂಸ್ಥೆಯಲ್ಲಿ ದೂರೊಂದನ್ನು ದಾಖಲಿಸಿ, ಸಿಎಲ್-2 ಹಾಗೂ ಸಿಎಲ್-9 ಗಳಲ್ಲಿ ಬಾರಿ ಅಕ್ರಮ ನಡೆಯುತ್ತಿದ್ದು, ಮುಕ್ತವಾಗಿ ಲೂಸ್ ಮದ್ಯ ನೀಡಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಅಂಗಡಿ ಮಾಲೀಕರು, ಪರಿಚಾರಕರನ್ನು ಇಟ್ಟುಕೊಂಡು ಲೂಸ್ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆ. ಗ್ರಾಹಕರಿಗೆ ರಸೀದಿ ಸಹ ನೀಡುವುದಿಲ್ಲ. ಸಿಎಲ್-2, ಸಿಎಲ್-9 ಅಂಗಡಿ ಮಾಲೀಕರಿಂದ ಲಂಚದ ರೂಪದಲ್ಲಿ ಹಣ ಪಡೆದು ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ, ಎದುರುದಾರರಾದ (1) ಶ್ರೀ ಲಕ್ಷ್ಮೀಶ್, ಅಬಕಾರಿ ನಿರೀಕ್ಷಕರು, ವಿರಾಜಪೇಟೆ ವಲಯ, ಕೊಡಗು ಜಿಲ್ಲೆ (2) ಶ್ರೀ ಸಂಪತ್, ಅಬಕಾರಿ ನಿರೀಕ್ಷಕರು, ಸೋಮವಾರಪೇಟೆ ವಲಯ, ಕೊಡಗು ಜಿಲ್ಲೆ ಮತ್ತು (3) ಶ್ರೀ ಮೋಹನ್, ಅಬಕಾರಿ ನಿರೀಕ್ಷಕರು, ಮಡಿಕೇರಿ ವಲಯ, ಕೊಡಗು ಜಿಲ್ಲೆರವರ ವಿರುದ್ಧ ಆಪಾದಿಸಿ ಕ್ರಮ ಕೈಗೊಳ್ಳಲು ಕೋರಿದ್ದಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಪ್ರಕರಣದ ಆರೋಪಗಳ ಬಗ್ಗೆ ತನಿಖೆ ನಡೆಸಿ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ರವರು ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಎದುರುದಾರರು ನಿಯಮ ಉಲ್ಲಂಘನೆ ಮಾಡಿದವರ ಮೇಲೆ ಅನೇಕ ಮೊಕದ್ದಮೆಗಳನ್ನು ದಾಖಲಿಸಿದ್ದರೂ ಸಹ ಪೂರ್ಣ

ಪ್ರಮಾಣದಲ್ಲಿ ಅಪರಾಧಗಳನ್ನು ತಡೆಗಟ್ಟುವಲ್ಲಿ ವಿಫಲವಾಗಿರುವುದು ಕಂಡು ಬರುತ್ತದೆ ಎಂದು ಮದ್ಯದಂಗಡಿಗಳ ಪರಿಶೀಲನೆ ವೇಳೆ ತೆಗೆದ ಸಿಡಿ ಸಹಿತ ವರದಿ ಸಲ್ಲಿಸಿರುತ್ತಾರೆ.

3. ಡೆಪ್ಯೂಟಿ ಕಮೀಷನರ್ ಆಪ್ ಎಕ್ಸೈಸ್, ಮಡಿಕೇರಿ, ಕೊಡಗು ಜಿಲ್ಲೆ ರವರು ತಮ್ಮ ವರದಿಯಲ್ಲಿ ಎಲ್ಲಾ ವಲಯದ ಅಧಿಕಾರಿಗಳಿಗೆ ಅಬಕಾರಿ ಅಕ್ರಮಗಳ ಬಗ್ಗೆ ಕ್ರಮ ಜರುಗಿಸಲು ಸೂಚಿಸಲಾಗಿದೆ. ಮುಂದೆಯೂ ಕೂಡ ಅಕ್ರಮ ಕಂಡು ಬಂದಲ್ಲಿ, ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂಬ ಮಾಹಿತಿಯನ್ನು ಸಲ್ಲಿಸಿರುತ್ತಾರೆ.

4. ದೂರುದಾರರು ತನಿಖಾ ವರದಿಗೆ ಪ್ರತ್ಯುತ್ತರ ನೀಡಿದ್ದು, ದೂರಿನಂತೆಯೇ ಆರೋಪಿಸಿ ಕ್ರಮ ಜರುಗಿಸಲು ಕೋರಿರುತ್ತಾರೆ.

5. 1 ರಿಂದ 3ರವರೆಗಿನ ಎದುರುದಾರರುಗಳು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ರವರು ಸಲ್ಲಿಸಿದ ವರದಿಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ:-

> *"ಅಕ್ಟೋಬರ್ 2009 ರಲ್ಲಿ ಅಬಕಾರಿ ನಿರೀಕ್ಷಕನಾಗಿ ಪದೋನತಿ ಹೊಂದಿ ಕೊಡಗು ಜಿಲ್ಲೆಯ ವಿರಾಜಪೇಟೆ ವಲಯ ಕಛೇರಿಗೆ ವರ್ಗಾವಣೆಗೊಂಡು ಅಕ್ಟೋಬರ್ 2016 ರಿಂದ ವಿರಾಜಪೇಟೆ ಉಪ-ವಿಭಾಗದ ಅಬಕಾರಿ ಉಪ-ಅಧೀಕ್ಷಕರ ಕಛೇರಿಯ, ಅಬಕಾರಿ ಉಪ-ಅಧೀಕ್ಷಕರು ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.*
>
> *ಪ್ರಸಕ್ತ 2016-17ನೇ ಸಾಲಿನ ಅಬಕಾರಿ ವರ್ಷದಲ್ಲಿ ವಿರಾಜಪೇಟೆ ವಲಯ ಅಬಕಾರಿ ನಿರೀಕ್ಷಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನನ್ನ ಅಧೀನ ಸಿಬ್ಬಂದಿಗಳಾದ ಅಬಕಾರಿ ಉಪ-ನಿರೀಕ್ಷಕರು-1ರವರು ವಿವಿಧ ರೀತಿಯ ಸನ್ನದು ಷರತ್ತುಗಳ ಉಲ್ಲಂಘನೆ ಸಂಬಂಧ 13 ಮೊಕದ್ದಮೆಯನ್ನು ದಾಖಲಿಸಿರುತ್ತಾರೆ.*
>
> *ನನ್ನ ಅಧೀನ ಸಿಬ್ಬಂದಿಗಳಾದ ಅಬಕಾರಿ ಉಪ-ನಿರೀಕ್ಷಕರು-2 ರವರು ವಿವಿಧ ರೀತಿಯ ಸನ್ನದು ಷರತ್ತುಗಳ ಉಲ್ಲಂಘನೆ ಸಂಬಂಧ 14 ಮೊಕದ್ದಮೆಯನ್ನು ದಾಖಲಿಸಿರುತ್ತಾರೆ.*

*ಅಧೀಕ್ಷಕನಾಗಿ ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ವಿವಿಧ ರೀತಿಯ ಸನ್ನದು ಷರತ್ತುಗಳ ಉಲ್ಲಂಘನೆ ಸಂಬಂಧ 13 ಮೊಕದ್ದಮೆಯನ್ನು ದಾಖಲಿಸಿರುತ್ತೇನೆ.*

*ಪ್ರಸಕ್ತ 2016–17ನೇ ಸಾಲಿನ ಅಬಕಾರಿ ವರ್ಷದಲ್ಲಿ ವಿರಾಜಪೇಟೆ ಉಪ–ವಿಭಾಗ ಕಛೇರಿಯ ಅಬಕಾರಿ ಉಪ–ಅಧೀಕ್ಷಕನಾಗಿ ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ನನ್ನ ಅಧೀನ ಸಿಬ್ಬಂದಿಗಳಾದ ಅಬಕಾರಿ ಉಪ–ನಿರೀಕ್ಷಕರು ವಿವಿಧ ರೀತಿಯ ಸನ್ನದು ಷರತ್ತುಗಳ ಉಲ್ಲಂಘನೆ ಸಂಬಂಧ 26 ಮೊಕದ್ದಮೆಯನ್ನು ದಾಖಲಿಸಿರುತ್ತಾರೆ.*

*2012 ರಿಂದ 2016 ರವರೆಗೆ ನಾನು ಅಬಕಾರಿ ನಿರೀಕ್ಷಕನಾಗಿ ವಿವಿಧ ರೀತಿಯ ಸನ್ನದು ಷರತ್ತುಗಳ ಉಲ್ಲಂಘನೆ ಸಂಬಂಧ 59 ಮೊಕದ್ದಮೆಯನ್ನು ದಾಖಲಿಸಿರುತ್ತೇನೆ.*

*ಅಬಕಾರಿ ಇಲಾಖಾ ವತಿಯಿಂದ ಸಾರ್ವಜನಿಕ ಪ್ರಕಟಣೆಯನ್ನು ಸನ್ನದು ಆವರಣದಲ್ಲಿ ಅಳವಡಿಸಿದ್ದು, ಪ್ರಕಟಣೆಯಲ್ಲಿ ಈ ಸನ್ನದಿನಲ್ಲಿ ಎಲ್ಲಾ ಮದ್ಯಗಳನ್ನು ಎಂ.ಆರ್.ಪಿ ದರದಲ್ಲಿ ಮಾರಾಟ ಮಾಡುತ್ತಿರುತ್ತದೆ. ಒಂದು ವೇಳೆ ಎಂ.ಆರ್.ಪಿ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಕಂಡು ಬಂದಲ್ಲಿ ಅಬಕಾರಿ ನಿರೀಕ್ಷಕರು ಮತ್ತು ಅಬಕಾರಿ ಉಪ–ನಿರೀಕ್ಷಕರು ದೂರವಾಣಿಗೆ ಸಂಪರ್ಕಿಸಬೇಕಾಗಿ ಕೋರಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿರುತ್ತದೆ. ಎಲ್ಲಾ ಸನ್ನದು ಮಳಿಗೆಯಲ್ಲಿ ದರಪಟ್ಟಿ ಪ್ರದರ್ಶಿಸಿರುವ ಮತ್ತು ಸಾರ್ವಜನಿಕ ಪ್ರಕಟಣೆಯನ್ನು ಅಳವಡಿಸಿರುವ ಛಾಯಾಚಿತ್ರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ" ಎಂದು ನಮೂದಿಸಿರುತ್ತಾರೆ.*

2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ:–

*"ನಾನು ಸೋಮವಾರಪೇಟೆ ಉಪವಿಭಾಗದ ಅಬಕಾರಿ ನಿರೀಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದು, ಆಡಳಿತಾತ್ಮಕ ಕಾರಣಗಳಿಗಾಗಿ ಮಾನ್ಯ ಅಬಕಾರಿ ಉಪ ಆಯುಕ್ತರು, ಕೊಡಗು ಜಿಲ್ಲೆ ಇವರ ಆದೇಶಾನುಸಾರ ದಿ: 01/04/2014 ರಿಂದ 30/04/2014ರ ವರೆಗೆ ಪ್ರಭಾರದಲ್ಲಿ ಕಾರ್ಯನಿರ್ವಹಿಸಿರುತ್ತೇನೆ. ಮೂಲ ಹುದ್ದೆಯ ಜೊತೆಗೆ ವಲಯ ಕಛೇರಿಯ ಪ್ರಭಾರ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದ ಅವಧಿಯಲ್ಲಿ*

*ಯಾವುದೇ ಸನ್ನದುಗಳಲ್ಲಿ ನಿಯಮಬಾಹಿರ ವ್ಯವಹಾರ ನಿರ್ವಹಿಸಲು ಪ್ರೋತ್ಸಾಹಿಸಿರುವುದಿಲ್ಲ. ನನ್ನ ಅಧಿಕಾರದ ಮಿತಿಯೊಳಗೆ ನಿಯಮಗಳನ್ನು ಪಾಲಿಸುವಂತೆ ಸೂಚಿಸಿರುತ್ತೇನೆಯೇ ಹೊರತು ಅಕ್ರಮಗಳಿಗೆ ಅವಕಾಶವಾಗದಂತೆ ಕಾರ್ಯನಿರ್ವಹಿಸಿರುತ್ತೇನೆ. ಒಟ್ಟು ವಿವಿಧ ಮಾದರಿಯ 80 ಸನ್ನದುಗಳಲ್ಲಿ ನಿಯಮಗಳನ್ನು ಪಾಲಿಸುತ್ತಿರುವ ಬಗ್ಗೆ ಆಗಿಂದ್ದಾಗ್ಗೆ ಸನ್ನದುಗಳಿಗೆ ಭೇಟಿ ನೀಡಿ ಎಚ್ಚರಿಸುವ ಕಾರ್ಯನಿರ್ವಹಿಸಿರುತ್ತೇನೆ. ಅಲ್ಲದೇ ಸದರಿ ಸಂದರ್ಭಗಳಲ್ಲಿ ನಿಯಮಗಳನ್ನು ಉಲ್ಲಂಘಿಸಿದ ಸನ್ನದುಗಳ ವಿರುದ್ಧ ಅಬಕಾರಿ ನಿಯಮಗಳಡಿಯಲ್ಲಿ ಪತ್ರಗಳನ್ನು ದಾಖಲಿಸಿ ಸರ್ಕಾರಕ್ಕೆ ದಂಡ ಪಾವತಿಯಾಗುವಂತೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಆದಾಗ್ಯೂ ಕೆಲವು ಸ್ನದುಗಳಲ್ಲಿರುವ ನೌಕರರುಗಳಿಗೆ ನಿಯಮಗಳ ತಿಳುವಳಿಕೆ ಇಲ್ಲದೆ ಸಣ್ಣ ನ್ಯೂನತೆಗಳು ಉಂಟಾಗುತ್ತಿದ್ದು, ಇವುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಕರಣಗಳನ್ನು ದಾಖಲಿಸುತ್ತಿದ್ದೇನೆ"* ಎಂದು ನಮೂದಿಸಿರುತ್ತಾರೆ.

3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ:-

*ಮಡಿಕೇರಿ ತಾಲ್ಲೂಕಿನ ಅಬಕಾರಿ ವಲಯ ನಿರೀಕ್ಷಕನಾಗಿ ಹೆಚ್ಚುವರಿ ಪ್ರಭಾರದಲ್ಲಿ ದಿ:02/08/2014 ರಿಂದ 28/12/2015ರವರೆಗೆ ಒಟ್ಟು 16 ತಿಂಗಳು ಪ್ರಭಾರ ನಿರೀಕ್ಷಕನಾಗಿ ಮಡಿಕೇರಿ ವಲಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಸದರಿ ಸಮಯದಲ್ಲಿ ಮಡಿಕೇರಿ ತಾಲ್ಲೂಕಿನ ಒಟ್ಟು 19 ಸಿಎಲ್-2 ಸನ್ನದು ಹಾಗೂ 16-ಸಿಎಲ್-9 ಮದ್ಯದಂಗಡಿ ನಡೆಯುತ್ತಿದ್ದು, ಪ್ರತಿ ಮಾಹೆಯಲ್ಲಿ ಅಬಕಾರಿ ಕೈಪಿಡಿಯಂತೆ ಸನ್ನದುಗಳ ಮೇಲೆ ಕೂಲಂಕುಶ ಪರಿಶೀಲನೆ ನಡೆಸುತ್ತಿದ್ದು, ಅಕ್ರಮಗಳು ಕಂಡು ಬಂದಲ್ಲಿ ಸನ್ನದಗುಳ ಮೇಲೆ ಅಬಕಾರಿ ಕಾನೂನಿನಂತೆ ಕ್ರಮ ಕೈಗೊಂಡು ಮೊಕದ್ದಮೆ ದಾಖಲಿಸಿಕೊಳ್ಳಲಾಗಿರುತ್ತದೆ.*

*2014-15, 2015-16 ಹಾಗೂ 2016-17ರ ಸಾಲಿನಲ್ಲಿ ನಾನು ಕರ್ತವ್ಯ ನಿರ್ವಹಿಸಿದ ತಾಲ್ಲೂಕಿನಲ್ಲಿ ಸಿಎಲ್ -2 ಮತ್ತು ಸಿಎಲ್-9 ಸನ್ನದು ಮದ್ಯದಂಗಡಿ ಮೇಲೆ ದಾಖಲಿಸಿಕೊಂಡ ಮೊಕದ್ದಮೆಗಳ ವಿವರವಾದ ತ:ಖ್ತೆಯನು ಇದರೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ"* ಎಂದು ನಮೂದಿಸಿರುತ್ತಾರೆ.

6. ಪಿರ್ಯಾದುದಾರರು ಸಲ್ಲಿಸಿರುವ ದೂರು ಮತ್ತು ಪ್ರತ್ಯುತ್ತರಗಳು ಮತ್ತು ತನಿಖಾಧಿಕಾರಿಗಳ ತನಿಖಾ ವರದಿಯಲ್ಲಿ ನಮೂದಿಸಿದಂತೆ ಇಲಾಖಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದು ಅತ್ಯಾವಶ್ಯಕವೆಂದು ಕಂಡು ಬಂದಿರುತ್ತದೆ. ಸನ್ನದು ಷರತ್ತುಗಳ ಕಟ್ಟುನಿಟ್ಟಿನ ಪಾಲನೆ ಮಾಡುವುದು, ಸನ್ನದು ಮಳಿಗೆಯಲ್ಲಿ ಮದ್ಯಗಳ MRP ದರಪಟ್ಟಿ ಪ್ರದರ್ಶಿಸುವ ಹಾಗೂ ಸಾರ್ವಜನಿಕ ಪ್ರಕಟಣೆಗಳನ್ನು ಸನ್ನದು ಆವರಣದಲ್ಲಿ ಅಳವಡಿಸುವ ನಿಯಮಗಳಲ್ಲಿ ಕಟ್ಟುನಿಟ್ಟಿನ ಪರಿಪಾಲನೆ ಅವಶ್ಯವಾಗಿದ್ದು, ಕಾಲಕಾಲಕ್ಕೆ ಸನ್ನದು ಆವರಣಗಳಿಗೆ ಭೇಟಿ ನೀಡಿ ನಿಯಮ ಪರಿಪಾಲನೆ ಆಗುತ್ತಿದೆಯೇ ಎಂದು ಪರಿಶೀಲಿಸಿ ನಿಯಮಾನುಸಾರ ಕ್ರಮ ತೆಗೆದುಕೊಂಡ ನಂತರವು ಉಲ್ಲಂಘನೆಯಾಗುತ್ತಿದ್ದಲ್ಲಿ ಸನ್ನದುದಾರರ ಸನ್ನದ್ದನ್ನು ರದ್ದು ಗೊಳಿಸುವುದು ಅತ್ಯವಶ್ಯಕವಾಗಿರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಕೊಡಗು ಜಿಲ್ಲೆಯಲ್ಲಿರುವ ಮೂರು ತಾಲ್ಲೂಕುಗಳ ಅಬಕಾರಿ ನಿರೀಕ್ಷಕರ ವ್ಯಾಪ್ತಿಯಲ್ಲಿ ಬರುವ ಸಿಎಲ್-2 ಹಾಗೂ ಸಿಎಲ್-9 ಗಳಲ್ಲಿ ಸನ್ನದು ಮಳಿಗೆಯಲ್ಲಿ ಮದ್ಯಗಳ MRP ದರಪಟ್ಟಿ ಪ್ರದರ್ಶಿಸುವ ಹಾಗೂ ಸಾರ್ವಜನಿಕ ಪ್ರಕಟಣೆಗಳನ್ನು ಸನ್ನದು ಆವರಣದಲ್ಲಿ ಅಳವಡಿಸುವ ನಿಯಮಗಳಲ್ಲಿ ಕಟ್ಟುನಿಟ್ಟಿನ ಪರಿಪಾಲನೆ ಅವಶ್ಯವಾಗಿದ್ದು, ಕಾಲಕಾಲಕ್ಕೆ ಸನ್ನದು ಆವರಣಗಳಿಗೆ ಭೇಟಿ ನೀಡಿ ನಿಯಮ ಪರಿಪಾಲನೆ ಆಗುತ್ತಿದೆಯೇ ಎಂದು ಪರಿಶೀಲಿಸಿ ನಿಯಮಾನುಸಾರ ಕ್ರಮ ತೆಗೆದುಕೊಂಡ ನಂತರವು ಉಲ್ಲಂಘನೆಯಾಗುತ್ತಿದ್ದಲ್ಲಿ ಸನ್ನದುದಾರರ ಸನ್ನದ್ದನ್ನು ರದ್ದು ಗೊಳಿಸಲು ಹಾಗೂ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಎದುರುದಾರರಾಗಲೀ ಅಥವಾ ಕರ್ತವ್ಯ ನಿರ್ವಹಿಸುತ್ತಿರುವ ನಿರೀಕ್ಷಕರಾಗಲಿ ನಿಯಮ ಉಲ್ಲಂಘನೆ ಮಾಡಿದ ಸನ್ನದುದಾರರ ಸನ್ನದನ್ನು ರದ್ದುಗೊಳಿಸುವ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿದಲ್ಲಿ ಅಂತಹ ಅಬಕಾರಿ ನಿರೀಕ್ಷಕರ ವಿರುದ್ಧ ಕಾನೂನಿನಡಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಒಂದು ತಿಂಗಳೊಳಗೆ ಕ್ರಮ ಕೈಗೊಂಡು, ಕೈಗೊಂಡ ಕ್ರಮವನ್ನು ಈ ಸಂಸ್ಥೆಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 25/1/18

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.